**ಪ್ರಧಾನ ಸಿವಿಲ್ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಃಸುರಪುರ**

| | |
|---|---|
| ಸಿ.ಸಿ | 5551/2023 |
| ಸಿ.ಡಬ್ಲ್ಯೂ 1 | ಪಿ.ಡಬ್ಲ್ಯೂ 1 |
| ದಿನಾಂಕ | 05-07-2024 |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

| | |
|---|---|
| **ಹೆಸರು** | ಮೌನೇಶ |
| **ತಂದೆ/ತಾಯಿ/ಗಂಡನ ಹೆಸರು** | ತಿಮ್ಮಣ್ಣ |
| **ವಯಸ್ಸು** | 34 ವರ್ಷ |
| **ಉದ್ಯೋಗ** | ಒಕ್ಕಲುತನ |
| **ವಾಸ** | ತಿಂಥಣಿ |

**ಮುಖ್ಯವಿಚಾರಣೆಃ ಶ್ರೀ ಎಪಿಪಿ ರವರಿಂದ**

ಚಾಸಾ 4 ರಿಂದ 9 ರವರ ಪರಿಚಯ ಇದೆ.

ನನಗೆ ಸೇರಿದ 50 ಕುರಿಗಳು ಇದ್ದವು. ಅವುಗಳನ್ನು ನಮ್ಮ ಊರಿನ ಒಂದು ಜನತಾ ಮನೆಯಲ್ಲಿ ಇರಿಸಿದ್ದೆನು. ಸುಮಾರು 8-9 ತಿಂಗಳ ಹಿಂದೆ ಚಾಸಾ 6 ರವರು ನಮ್ಮ ಕುರಿಗಳನ್ನು ಜನತಾ ಮನೆಯಲ್ಲಿ ಹಾಕಿ ಮನೆಗೆ ಬಂದಿದ್ದರು. ಚಾಸಾ 6 ರವರು ಬೆಳಿಗ್ಗೆ ಹೋಗಿ ನೋಡಿದಾಗ 4 ಕುರಿಗಳು ಕಾಣೆಸಲಿಲ್ಲ. ನಂತರ ನಾನು, ಚಾಸಾ 6 ರವರು ಸುತ್ತಲಿನ ಹೊಲಗಳಲ್ಲಿ ಹುಡಿಕಾಡಿದರೂ ಕುರಿಗಳು ಸಿಗಲಿಲ್ಲ. ಆದ್ದರಿಂದ ಪೋಲೀಸ ಠಾಣೆಯಲ್ಲಿ ಪಿರ್ಯಾದಿ ಸಲ್ಲಿಸಿದ್ದೇನೆ. ಸಾಕ್ಷಿ ಪಿರ್ಯಾದಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಹೆಬ್ಬೆಟ್ಟು ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ನಾನು ಪಿರ್ಯಾದಿಯನ್ನು ಸಲ್ಲಿಸಿದ ನಂತರ ಪೋಲೀಸರು ಪಂಚನಾಮೆ ಮಾಡಲು ನಾನೇ ಸ್ಥಳವನ್ನು ತೋರಿಸಿದ್ದೇನೆ. ಆಗ ಎರಡು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಪೋಲೀಸರು ಒಂದು ಮುರಿದ ಕೀಲಿ ಮತ್ತು ಒಂದು ಕಬ್ಬಿಣದ ರಾಡನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಎರಡು ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ಮುರಿದ ಕೀಲಿಯನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಪೋಲೀಸರು ಆರೋಪಿಗಳು ಸಿಕ್ಕಿದ್ದಾರೆ ಎಂದು ತಿಳಿಸಿರುತ್ತಾರೆ. ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಾನು ಯಾವುದೇ ಪುನರ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೇಳಿದ್ದರಿಂದ ಅವಕಾಶ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿನಾಂಕ 03-12-2022 ಮತ್ತು 04-12-2022 ರ ರಾತ್ರಿ ವೇಳೆಯಲ್ಲಿ ಕಳ್ಳತನ ಆಗಿತ್ತು ಎಂದರೆ ಸರಿ. ನಂತರ ಕಳ್ಳರು ಸಿಕ್ಕಾಗ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ದಿನಾಂಕ 08-12-2022 ರಂದು ಪೋಲೀಸರು ನನ್ನನ್ನು ಕರೆಯಿಸಿ ಆರೋಪಿತರನ್ನು ತೋರಿಸಿ ಅವರ ಹೆಸರು ನಾರಾಯಣ ತಂದೆ ಯಮನಪ್ಪ ಚವಾಹ, ಮೋಹನ ತಂದೇ ಕೀರ್ಯಾ ಚವಹಾನ ಇಬ್ಬರು ಕನ್ಯಾಕೋಳೂರು ತಾಂಡದವರು ಎಂದು ತಿಳಿಸಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯ ಸ್ಕಾರ್ಪಿಯೋ ವಾಹನ ಸಂಖ್ಯೆ ಕೆಎ 03 ಎಂ.ಪಿ 5523 ನೇದ್ದನ್ನು 3 ನೇ ಆರೋಪಿ ಚಾಲಕನಾಗಿ ಇದ್ದ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿತರೇ ಕಳ್ಳತನ ಮಾಡಿರುವುದಾಗಿ ನನಗೆ ತೋರಿಸಿ ನನ್ನ ಪುನರ ಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ಹೆಚ್.ಜೆ ನ್ಯಾಯವಾದಿಗಳಿಂದ.**

ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ಇದೇ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಸದರಿ ಆರೋಪಿ ಯಾವ ವಾಹನಮ್ನ ನಡೆಸುತ್ತಿದ್ದನು ಎಂದು ನನಗೆ ಗೊತ್ತಿಲ್ಲ. ಸದರಿ ಆರೋಪಿ ಕಳ್ಳತನ ಮಾಡಿದ್ದಾನೊ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಹಾಗೂ ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಸುರಪೂರ**